
# ಪ್ರಿ-ಟ್ಯಾಗ್‌ಗೆ ಟ್ರಾಯ್ ಗಡವು

**ಟೆಲಿಕಾಂ ಕಂಪನಿಗಳಿಗೆ ಟ್ರಾಯ್ ಬಿಸಿ ಮುಟ್ಟಿಸಿದ್ದು, ಪ್ರಿ–ಟ್ಯಾಗ್ ನಿಯಂತ್ರಕ ಕ್ರಮಗಳನ್ನು ಅಳವಡಿಸಿಕೊಳ್ಳಲು ಗಡುವು ನೀಡಿದೆ. ಬಳಕೆದಾರರಿಗೆ ಸುರಕ್ಷತೆ ಕಲ್ಪಿಸುವ ನಿಟ್ಟಿನಲ್ಲಿ ಟ್ರಾಯ್ ದಿಟ್ಟ ಹೆಜ್ಜೆಯಿರಿಸಿದೆ.**

**■ ಶಶಿಕುಮಾರ್ ಸಿ.**




ಜಾಹೀರಾತು, ಪ್ರಮೋಷನ್, ಸೇವೆ ಸೇರಿದಂತೆ ಇನ್ನಿತರ ಮಾದರಿಯ ಮೆಸೇಜ್‌ಗಳು, ಅಪ್ಲಿಕೇಷನ್ ಯುಆರ್‌ಎಲ್‌ಗಳು ಮತ್ತು ಕಾಲ್‌ಬ್ಯಾಕ್ ಸಂಖ್ಯೆಗಳಂತಹ ಎಲ್ಲಾ ವೇರಿಯಬಲ್ ಅಂಶಗಳಿಗೆ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) 'ಪ್ರಿ–ಟ್ಯಾಗ್' ನಿಯಂತ್ರಕ ಕ್ರಮವನ್ನು ಕಡ್ಡಾಯಗೊಳಿಸಿದ್ದು, ಕೊನೆಯ ಗಡುವನ್ನು ನಿಗದಿ ಪಡಿಸಿದೆ.

ಟೆಲಿಕಾಂ ವಲಯದಲ್ಲಿ ಹೆಚ್ಚುತ್ತಿರುವ ಡಿಜಿಟಲ್ ವಂಚನೆ ಮತ್ತು ನಕಲಿ ಲಿಂಕ್‌ಗಳ ಬಳಕೆಯನ್ನು ತಡೆಯುವುದು 'ಪ್ರಿ–ಟ್ಯಾಗ್' ನಿಯಂತ್ರಕ ಕ್ರಮ ಕಡ್ಡಾಯದ ಹಿಂದಿನ ಉದ್ದೇಶ. ಇದು ಟ್ರಾಯ್‌ನ ದಿಟ್ಟ ನಿರ್ಧಾರವಾಗಿದೆ.

'ಪ್ರಿ–ಟ್ಯಾಗ್' ಅಥವಾ 'ಪ್ರಿ–ಟ್ಯಾಗಿಂಗ್' ಎನ್ನುವುದು ಮುಖ್ಯವಾಗಿ ವಾಣಿಜ್ಯಾತ್ಮಕ ಸಂದೇಶಗಳ ಮೂಲಕ ನಡೆಯುವ ವಂಚನೆ ಮತ್ತು ಸ್ಪ್ಯಾಮ್ ತಡೆಯುವ ನಿಯಂತ್ರಕ ಕ್ರಮ।ಇದನ್ನು ಕಡ್ಡಾಯಗೊಳಿಸುವಂತೆ ಟ್ರಾಯ್ ಎಲ್ಲಾ ಸೇವಾ ಪೂರೈಕೆದಾರರಿಗೆ ನಿರ್ದೇಶನ ನೀಡಿದೆ. ಸೈಬರ್ ಅಪರಾಧ, ಫಿಶಿಂಗ್ ಮತ್ತು ಬ್ಯಾಂಕಿಂಗ್ ವಂಚನೆ ತಡೆಯುವಲ್ಲಿ ಈ ಕ್ರಮವು ನಿರ್ಣಾಯಕವೆಂದು ಪರಿಗಣಿಸಲಾಗಿದೆ.

ಎಸ್‌ಎಂಎಸ್ ಟೆಂಪ್ಲೇಟ್ ನೋಡಿಯೇ ಅದು ಯಾವ ಕ್ಷೇತ್ರಕ್ಕೆ ಸಂಬಂಧಿಸಿದ ಸಂದೇಶ ಎಂದು ನಿರ್ಧರಿಸಲು ಇದು ಸಹಕಾರಿ. ಸಂದೇಶದ ಯಾವ ಭಾಗಗಳು ದುರುದ್ದೇಶಪೂರಿತ ಲಿಂಕ್‌ಗಳನ್ನು ಹೊಂದಿರಬಹುದು ಎಂಬುದನ್ನು ಗುರುತಿಸಲು ಮತ್ತು ಅವುಗಳನ್ನು ತಡೆಯಲು ಈ ಕ್ರಮ ಅನುವು ಮಾಡಿಕೊಡುತ್ತದೆ.

## ಸಫಿಕ್ಸ್ ಮ್ಯಾಪಿಂಗ್ ವಿಧಾನ

ಟ್ರಾಯ್ ಕಡ್ಡಾಯಗೊಳಿಸಿರುವ ಪ್ರಿ–ಟ್ಯಾಗ್ ನಿಯಂತ್ರಕ ಕ್ರಮವನ್ನು ಎಸ್‌ಎಂಎಸ್‌ಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಉದಾಹರಣೆಗೆ, ಹಲವಾರು ರೀತಿಯ ಸಂದೇಶಗಳು ಮೊಬೈಲ್‌ನಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತವೆ. ಹೀಗೆ ಕಾಣಿಸಿಕೊಳ್ಳುವ ಮೆಸೇಜ್‌ಗಳ ಹೆಡ್ಡಿಂಗ್‌ನ ಕೊನೆಯ ಅಕ್ಷರಗಳು ಪಿ, ಎಸ್, ಟಿ, ಜಿ (ಇಂಗ್ಲಿಷ್ ಅಕ್ಷರಗಳು) ಎಂದು ಕಡ್ಡಾಯವಾಗಿ ಇರಲೇಬೇಕು. ಮೆಸೇಜ್‌ಗಳು ಯಾವ ಉದ್ದೇಶಗಳೊಂದಿಗೆ ಬಂದಿವೆ ಎಂಬುದನ್ನು ಈ ಅಕ್ಷರಗಳು ತೋರುತ್ತವೆ.

ಪಿ ಎಂದರೆ ಪ್ರಮೋಷನಲ್ (ಜಾಹೀರಾತು ಸಂಬಂಧಿತ) ಮೆಸೇಜ್, ಎಸ್ ಎಂದರೆ ಸರ್ವೀಸ್ (ಸೇವಾ ಉದ್ದೇಶ) ಮೆಸೇಜ್, ಟಿ ಎಂದರೆ ಟ್ರಾನ್ಸ್ಯಾಕ್ಷನಲ್ (ಬ್ಯಾಂಕಿನ ಖಾತೆಯ ಹಣ ವರ್ಗಾವಣೆ) ಮೆಸೇಜ್ ಹಾಗೂ ಜಿ ಎಂದರೆ ಗವರ್ನಮೆಂಟ್ (ಸರ್ಕಾರಿ ಸೇವೆಗಳ) ಮೆಸೇಜ್ ಎಂಬರ್ಥವನ್ನು ಇವು ತೋರುತ್ತವೆ. ಇವುಗಳನ್ನು ಸಫಿಕ್ಸ್ ಅಕ್ಷರಗಳೆಂದು ಕರೆಯಲಾಗುತ್ತದೆ. ಹೀಗೆ ಮಾಡುವುದರಿಂದ ಬಳಕೆದಾರರಿಗೆ ಸುಲಭವಾಗಿ ಸಂದೇಶಗಳ ಉದ್ದೇಶವನ್ನು ಅರಿಯಲು ಸಹಕಾರಿಯಾಗುತ್ತದೆ.

## ಪರಿಶೀಲನೆಗೊಳ್ಳಲಿದೆ ಟೆಂಪ್ಲೇಟ್

ತಾನು ಕೈಗೊಂಡಿರುವ ಈ ಕ್ರಮವು ಟೆಲಿಕಾಂ ಕಮರ್ಷಿಯಲ್ ಕಮ್ಯುನಿಕೇಷನ್ ಕಸ್ಟಮರ್ ಪ್ರಿಫೆರೆನ್ಸ್ ರೆಗ್ಯುಲೇಷನ್ 2018 (TCCCPR 2018) ಅಡಿಯಲ್ಲಿ ಅಸ್ತಿತ್ವದಲ್ಲಿರುವ ಸ್ಪ್ಯಾಮ್‌ವಿರೋಧಿ ಮತ್ತು ವಂಚನೆ ವಿರೋಧಿ ನಿಲುವನ್ನು ಮತ್ತಷ್ಟು ಬಲಪಡಿಸುತ್ತದೆ ಎಂಬುದು ಟ್ರಾಯ್ ಮಾತು. ಯಾವುದೇ ಲಿಂಕ್ ಅಥವಾ ಸಂಖ್ಯೆಯು ಸಂದೇಶವನ್ನು ಕಳುಹಿಸುವ ಮೊದಲು ಅದು ಪರಿಶೀಲನೆಗಳಿಗೆ ಒಳಗಾಗಿದೆ ಎಂಬುದನ್ನು ಪ್ರಿ–ಟ್ಯಾಗಿಂಗ್ ಸೂಚಿಸುತ್ತದೆ.

ಇದು ಬ್ಯಾಂಕಿಂಗ್, ಸರ್ಕಾರಿ ಸೇವೆಗಳು, ಹಣಕಾಸು ಮತ್ತು ಅಗತ್ಯ ಸೇವೆಗಳಿಗೆ ಸಂಬಂಧಿಸಿದ ಸಂದೇಶಗಳ ಸುರಕ್ಷತೆಯನ್ನು ಖಾತರಿಪಡಿಸುತ್ತದೆ. ದಿನೇ ದಿನೇ ಆನ್‌ಲೈನ್ ವಂಚನೆ ಹೆಚ್ಚುತ್ತಿದೆ ಮತ್ತು ಸ್ಕ್ಯಾಮರ್‌ಗಳು ಸುಧಾರಿತ ತಂತ್ರಗಳನ್ನು ಬಳಸುತ್ತಿದ್ದಾರೆ. ಈ ಸಂದರ್ಭದಲ್ಲಿ ಡಿಜಿಟಲ್ ಭದ್ರತೆಗೆ ಟ್ರಾಯ್‌ನ ಈ ನಿರ್ಧಾರವನ್ನು ನಿರ್ಣಾಯಕ ಎಂದು ಪರಿಗಣಿಸಲಾಗಿದೆ.

### ಪ್ರಿ-ಟ್ಯಾಗ್ ಇಲ್ಲದಿದ್ದರೆ?

ಸಂದೇಶದ ಮೂಲವನ್ನು ತಿಳಿಸುವ ಪ್ರಿ–ಟ್ಯಾಗ್ ನಿಯಂತ್ರಕ ಕ್ರಮ ಇಲ್ಲದಿದ್ದರೆ ಜನರಿಗೆ ಸಂದೇಶಗಳ ಮೂಲ ಗೊತ್ತಾಗದು. ಇದರಿಂದ ವಂಚಕರು ದುರುದ್ದೇಶಪೂರಿತ ಲಿಂಕ್‌ಗಳನ್ನು ಸಂದೇಶಗಳಲ್ಲಿ ಹರಿಬಿಟ್ಟು, ಅವುಗಳನ್ನು ಕ್ಲಿಕ್ ಮಾಡುವಂತೆ ಬಳಕೆದಾರರನ್ನು ಪರೋಕ್ಷವಾಗಿ ಪ್ರೇರೇಪಿಸುತ್ತವೆ.

ಕ್ಲಿಕ್ ಮಾಡುವುದರಿಂದ ಬಳಕೆದಾರರ ಮೊಬೈಲ್ ಫೋನ್‌ನಲ್ಲಿ ಮಾಲ್‌ವೇರ್ ನುಸುಳಿಸಿ, ಅವರ ವೈಯಕ್ತಿಕ ಮಾಹಿತಿ ಸೇರಿದಂತೆ ಬ್ಯಾಂಕ್ ಖಾತೆಗಳಿಗೆ ಅನಧಿಕೃತ ಪ್ರವೇಶವನ್ನು ಪಡೆಯಬಹುದು. ಇದಕ್ಕೆ ಕಡಿವಾಣ ಹಾಕಲು ಟ್ರಾಯ್‌ನ ಪ್ರಿ–ಟ್ಯಾಗ್ ಕಡ್ಡಾಯವಾಗಿದೆ.

## 60 ದಿನಗಳ ಗಡುವು

ಬ್ಯಾಂಕ್‌ಗಳು, ಹಣಕಾಸು ಕಂಪನಿಗಳು, ವಿಮಾ ಕಂಪನಿಗಳು ಮತ್ತು ದೊಡ್ಡ ವ್ಯವಹಾರಗಳಂತಹ ಕಂಪನಿಗಳು ತಾವು ಬಳಸುವ ಮೆಸೇಜ್ ಟೆಂಪ್ಲೇಟ್‌ಗಳಲ್ಲಿ ಪ್ರಿ–ಟ್ಯಾಗ್ ಆಯ್ಕೆಯನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು. ಈ ಸಂಬಂಧ ಈಗಾಗಲೇ ಅಸ್ತಿತ್ವದಲ್ಲಿರುವ ತಮ್ಮ ತಮ್ಮ ಮೆಸೇಜಿಂಗ್ ಟೆಂಪ್ಲೇಟ್‌ಗಳಲ್ಲಿ ಮಾರ್ಪಾಡುಗಳನ್ನು 60 ದಿನಗಳಲ್ಲಿ ಮಾಡಬೇಕಿದೆ. ಈ ಅವಧಿಯ ನಂತರ ಟ್ಯಾಗ್ ಮಾಡದ ಟೆಂಪ್ಲೇಟ್‌ಗಳಿಂದ ಕಳುಹಿಸಲಾದ ಸಂದೇಶಗಳು ತಿರಸ್ಕಾರಗೊಳ್ಳಲಿವೆ. ಈ ನಿರ್ಧಾರವು ಮೊಬೈಲ್ ಸಂವಹನ ಸೇವೆಗಳನ್ನು ಅವಲಂಬಿಸಿರುವ ಲಕ್ಷಾಂತರ ಬಳಕೆದಾರರಿಗೆ ಹೆಚ್ಚಿನ ಸುರಕ್ಷತೆ ಹಾಗೂ ಪಾರದರ್ಶಕತೆಯನ್ನು ಒದಗಿಸುತ್ತದೆ. ■